

ಎಂದು ಕಾಣುತ್ತದೆ. ಹತ್ತಿರವೇ ನಿಂತಿದ್ದ ಜಡೆಯಪ್ಪನ್ನೂ ಕೇಳಿದೆ, ‘ಏನಯ್ಯ ಮರದ ಮೇಲೆ ಇದ್ದಾಗ ನಿನಗೆ ಎಷ್ಟು ಜೇನು ಕುಟುಕಿತು?’ ಅವನು ಹೇಳಿದ, ‘ಜೇನು ಕಡಿಲೇ ಇಲ್ಲ ಅಂತ ಹೇಳಲ್ಲ ಸಾ... ಒಂದೋ ಎರಡೋ ಕುಟುಕಿವೆ, ಆದ್ರೆ ಅದು ನಮಗೆ ಅಭ್ಯಾಸ ಆಗಿದೆ, ನನಗೇನೂ ಆಗಲ್ಲ’. ಬಹುಶಃ ಹೊಗೆ ಎದ್ದಿದ್ದರಿಂದ ಅವುಗಳ ವರ್ತನೆಯಲ್ಲಿ ಕೋಪ ಸೇಡುಗಳು ಹುಟ್ಟಲಿಲ್ಲ ಎಂದು ಕಾಣುತ್ತದೆ. ಸಾವಿರಾರು ವರ್ಷಗಳ ವಿಕಾಸದ ಹಾದಿಯಲ್ಲಿ ಪ್ರಕೃತಿ ವಿಕೋಪಗಳನ್ನು ಒಪ್ಪಿಕೊಳ್ಳುವ ವರ್ತನೆ ಅವುಗಳಲ್ಲೂ ವಿಕಾಸವಾಗಿದೆ. ಕಾಡಿಗೆ ಬೆಂಕಿ ಬೀಳುವುದು, ಆಗ ತಮ್ಮ ಗೂಡು ಬಿಟ್ಟು ಪಲಾಯನ ಮಾಡುವುದು ಅವುಗಳ ವರ್ತನೆಯ ಭಾಗ. ಆದರೆ, ಹೊಗೆ ಬೆಂಕಿಗಳಾವುವೂ ಇಲ್ಲದೆ ತಮ್ಮ